**<u>ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 23-04-2026:</u>**

**<u>ಮುಂದುವರೆದ ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-</u>**

35. ಆರೋಪಿತರ ಕೆನರಾ ಬ್ಯಾಂಕ್ ಖಾತೆ ಸಂಖ್ಯೆ 53110158621ಗೆ ಸಂಬಂಧಿಸಿದ ಅಕೌಂಟ್ ಸ್ಟೇಟ್‌ಮೆಂಟ್ ಅನ್ನು ದಿಃ 12.2.15ರಂದು ಸದರಿ ಬ್ಯಾಂಕಿನ ಅದೇ ದಿನಾಂಕ ಪತ್ರವನ್ನು ಸ್ವೀಕರಿಸಿರುತ್ತೇನೆ. ಸದರಿ ಪತ್ರವನ್ನು ಈಗ ನೋಡುತ್ತಿದ್ದು ನಿಪಿ.193 ಎಂದು ಅದರಲ್ಲಿ ನನ್ನ ಸಹಿಯನ್ನು ನೋಡುತ್ತಿದ್ದು ಅದನ್ನು 193(1) ಎಂದು ಗುರುತಿಸಲಾಯಿತು. ಆರೋಪಿತರಿಗೆ ಸೇರಿದ ಕೆನರಾ ಬ್ಯಾಂಕ್ ಸಂಖ್ಯೆ 26433ಕ್ಕೆ ಸಂಬಂಧಿಸಿದ ಖಾತಾ ಎಕ್ಸಟ್ರ್ಯಾಕ್ಟ್ ಅನ್ನು ನಿಪಿ.71ರ ಪತ್ರದೊಂದಿಗೆ ನಿಪಿ.194ರಂತೆ ಹಿಂದಿನ ತನಿಖಾಧಿಕಾರಿ ಸ್ವೀಕರಿಸಿರುತ್ತೇನೆ.

36. ದಿಃ 10.02.14ರಂದು ಸಹಾಯಕ ನಿಯಂತ್ರಕ ಲೆಕ್ಕ ಪರಿಶೋದಕ ವರ್ತುಲ ಹಾಸನ ಇವರಿಗೆ ಪತ್ರ ಬರೆದು ಆರೋಪಿತರ ವೇತನ ಬರಾವರ್ಡ್ ಎಕ್ಸಟ್ರ್ಯಾಕ್ಟ್ ನ್ನು ನೀಡಿ ಅದನ್ನು ಅಡೀಟ್ ಮಾಡಿಕೊಡುವಂತೆ ಕೇಳಿಕೊಂಡಿರುತ್ತೇನೆ. ಅದನ್ನು ಪರಿಶೀಲಿಸಿ ದಿಃ 28.10.14ರಂದು ವರದಿಯನ್ನು ನೀಡಿದ್ದು ಒಟ್ಟು 29, 64, 810/- ರೂ. ಆಗಿರುತ್ತದೆ ಎಂದು ಹೇಳಿರುತ್ತಾರೆ. ಅವರು ನೀಡಿದ ಪತ್ರ ಮತ್ತು ಅದಕ್ಕೆ ಲಗತ್ತಿಸಿದ ದಾಖಲೆಗಳನ್ನು ಈಗ ನೋಡುತ್ತಿದ್ದು ಪತ್ರವನ್ನು ನಿಪಿ.195 ಎಂದು ಅದನ್ನು ಲಗತ್ತಿಸಿದ ದಾಖಲೆಗಳನ್ನು ನಿಪಿ.195(1) ಎಂದು ಗುರುತಿಸಲಾಯಿತು. ಅದು ಒಟ್ಟು 34 ಹಾಳೆಗಳನ್ನು ಒಳಗೊಂಡಿರುತ್ತದೆ.

37. ದಿಃ 20.06.14ರಂದು ವ್ಯವಸ್ಥಾಪಕರು ಭಾರತೀಯ ಜೀವಾ ವಿಮಾ ನಿಗಮ ಇವರಿಗೆ ಆರೋಪಿತರ ಮಗ ಸುದರ್ಶನ ರವರು ಎಲ್ ಐ ಸಿ ಏಜೆಂಟ್ ಆಗಿ ಕೆಲಸ ಮಾಡಿದ ಬಗ್ಗೆ ಮತ್ತು ಅವರಿಗೆ ಅದರಿಂದ ಕಮಿಷನ್ ಬಂದ ಬಗ್ಗೆ ಮಾಹಿತಿ ನೀಡಿದ ಬಗ್ಗೆ ನಿಪಿ.196ರಂತೆ ಪತ್ರವನ್ನು ಬರೆದಿರುತ್ತೇನೆ. ಅದಕ್ಕೆ ಸದರಿಯವರು ದಿಃ 07.07.2014ರಂದು ಪತ್ರದೊಂದಿಗೆ ನೀಡಿದ ಮಾಹಿತಿಯನ್ನು ಸ್ವೀಕರಿಸಿರುತ್ತೇನೆ. ಸದರಿ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.197 ಎಂದು ಗುರುತಿಸಲಾಯಿತು. ಅದರೊಂದಿಗೆ ಲಗತ್ತಿಸಿದ ದಾಖಲೆಯನ್ನು ನಿಪಿ.197(1) ಎಂದು

ಗುರುತಿಸಲಾಯಿತು.

38. ದಿಃ 03.01.2015ರಂದು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಸನ ಸಮಾಜಿಕ ಅರಣ್ಯ ಅಧಿಕಾರಿಗಳಿಗೆ ಪತ್ರ ಬರೆದು ಆರೋಪಿ ಪತ್ನಿ ಪದ್ಮಾವತಿರವರು ನಡೆಸುತ್ತಿದ್ದ ಗಣಪತಿ ಎಂಟರ್ ಪ್ರೈಸಸ್ ಗೆ ಶಾಂತಿಗ್ರಾಮ ಮತ್ತು ಚನ್ನರಾಯಪಟ್ಟಣ ವ್ಯಾಪ್ತಿಯ ನಡುತೋಪಿನಲ್ಲಿ ದೊರೆಯುವ ನೀಲಗಿರಿ ಸಿಟ್ರಿಯಡೋರ ಎಲೆಗಳ ಸಂಗ್ರಹ ಗುತ್ತಿಗೆಯನ್ನು ನೀಡಿದ ಬಗ್ಗೆ ಮಾಹಿತಿಯನ್ನು ನೀಡುವಂತೆ ಕೇಳಿಕೊಂಡಿರುತ್ತೇನೆ. ಆ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.198 ಎಂದು ಗುರುತಿಸಲಾಯಿತು.

39. ದಿಃ 18.02.2015ರಂದು ಸದರಿಯವರು ಪತ್ರ ಮುಖೇನ ನೀಡಿದ ಮಾಹಿತಿ ಮತ್ತು ಲಗತ್ತು ದಾಖಲೆಗಳನ್ನು ಸ್ವೀಕರಿಸಿರುತ್ತೇನೆ. ಪತ್ರಗಳನ್ನು ನೋಡುತ್ತಿದ್ದು ಅದನ್ನು ನಿಪಿ.199 ಮತ್ತು ಅದಕ್ಕೆ ಲಗತ್ತಿಸಿದ ದಾಖಲೆಗಳನ್ನು ನಿಪಿ.199(1) ಎಂದು ಗುರುತಿಸಲಾಯಿತು. ಅದರಲ್ಲಿ ಒಟು 04 ಹಾಳೆಗಳು ಒಳಗೊಂಡಿರುತ್ತದೆ.

40. ದಿಃ 19.02.2015ರಂದು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ರಾಜಸ್ವ ವಿಭಾಗ ಹಾಸನ ಇವರಿಗೆ ನಿಪಿ.200ರಂತೆ ಪತ್ರ ಬರೆದು ಆರೋಪಿತರ ಪತ್ನಿ ಪದ್ಮಾವತಿಯವರು ಚನ್ನರಾಯಪಟ್ಟಣ ವ್ಯಾಪ್ತಿಯ 21 ಹೆಕ್ಟೇರ್ ನಿಲಗಿರಿತೋಪಿನಲ್ಲಿ ಸಿಟ್ರಿಯಡೋರ ಎಲೆಗಳ ಸಂಗ್ರಹ ಗುತ್ತಿಗೆಯನ್ನು ನೀಡಿದ ಬಗ್ಗೆ ಮಾಹಿತಿಯನ್ನು ನೀಡುವಂತೆ ಕೇಳಿಕೊಂಡಿರುತ್ತೇನೆ. ಅದಕ್ಕೆ ಸದರಿಯವರು ದಿಃ 20.02.2015ರಂದು ನೀಡಿದ ಮಾಹಿತಿಯನ್ನು ಈಗಾಗಲೇ ಗುರುತಿಸಲ್ಪಟ್ಟಿರುವ ನಿಪಿ.142ರ ಪತ್ರದೊಂದಿಗೆ ಸ್ವೀಕರಿಸಿರುತ್ತೇನೆ. ಅದಕ್ಕೆ ಲಗತ್ತಾದ ದಾಖಲೆಗಳನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.142(1) ಎಂದು ಗುರುತಿಸಲಾಯಿತು. ಅದು 03 ಹಾಳೆಗಳನ್ನು ಒಳಗೊಂಡಿರುತ್ತದೆ.

41. ದಿಃ 03.01.2015ರಂದು ವ್ಯವಸ್ಥಾಪಕರು, ಸೋಣೀಸ್ ಅರೋಮೇಟಿಕ್ಸ್, ಮಾರೇನಹಳ್ಳಿ ಹಾನುಬಾಳು ಹೋ. ಸಕಲೇಶಪುರ ಇವರಿಗೆ ಪತ್ರ ಬರೆದು ಆರೋಪಿತರ ಪತ್ನಿ ಪದ್ಮಾವತಿಯವರಿಂದ ನೀಲಗಿರಿ ಎಂಟರ್ ಪ್ರೈಸಸ್ ರವರು ಖರೀದಿಸಿದ ಬಗ್ಗೆ ಮಾಹಿತಿ ನೀಡುವ ಬಗ್ಗೆ ಕೇಳಿಕೊಂಡಿರುತ್ತೇನೆ. ಸದರಿಯವರು ನಿಪಿ.158ರಂತೆ ನೀಡಿದ ಮಾಹಿತಿಯನ್ನು ಸ್ವೀಕರಿಸಿರುತ್ತೇನೆ.

ಅದಕ್ಕೆ ಲಗತ್ತಾಗಿ ನೀಡಿದ ದಾಖಲೆಗಳನ್ನು ಈಗ ನೋಡುತ್ತಿದ್ದು ಅದು ಒಟ್ಟು 11 ಹಾಳೆಗಳನ್ನು ಒಳಗೊಂಡಿದ್ದು ಅದನ್ನು ನಿಪಿ.158(1) ಎಂದು ಗುರುತಿಸಲಾಯಿತು.

42. ದಿಃ 22.01.2014ರಂದು ವ್ಯವಸ್ಥಾಪಕರು, ಕೆನರಾ ಬ್ಯಾಂಕ್ , ಹಾಸನ ಇವರಿಗೆ ಪತ್ರ ಬರೆದು ಆರೋಪಿತರ ಖಾತಾ ಸಂಖ್ಯೆ 0531619008521 ನೀಡುವಂತೆ ಈಗಾಗಲೇ ಗುರುತಿಸಲ್ಪಟ್ಟಿರುವ ನಿಪಿ.77ರಂತೆ ಪತ್ರ ಬರೆದಿರುತ್ತೇನೆ. ಅದಕ್ಕೆ ಸದರಿಯವರು ದಿಃ 15.02.2014ರಂದು ನಿಪಿ.78ರಂತೆ ನೀಡಿದ ಮಾಹಿತಿಯನ್ನು ದಿಃ 17.02.2014ರಂದು ಸ್ವೀಕರಿಸಿರುತ್ತೇನೆ. ಅದರೊಂದಿಗೆ ನೀಡಿದ ದಾಖಲೆಯನ್ನು ಈಗ ನೋಡುತ್ತಿದ್ದು ಅದು ಒಟ್ಟು 18 ಹಾಳೆಗಳನ್ನು ಒಳಗೊಂಡಿದ್ದು ಅದನ್ನು ಒಟ್ಟಾಗಿ ನಿಪಿ.78(1) ಎಂದು ಗುರುತಿಸಲಾಯಿತು.

43. ಎಡಿಜಿಪಿಯವರು ಜ್ಞಾಪನ ದಿಃ 30.05.2014ರಂದು ಷೆಡ್ಯೂಲ್ -1 ರಿಂದ 16ನ್ನು ಕಳುಹಿಸಿಕೊಟ್ಟದ್ದನ್ನು ದಿಃ 31.05.14ರಂದು ನಿಪಿ.201ರ ಪತ್ರದಂತೆ ಸ್ವೀಕರಿಸಿರುತ್ತೇನೆ. ಆ ಷೆಡ್ಯೂಲ್ ಅನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.202ರಂದು ಗುರುತಿಸಲಾಯಿತು.

44. ಅದೇ ರೀತಿಯಾಗಿ ದಿಃ 05.03.2014ರ ಪತ್ರದೊಂದಿಗೆ ಆರೋಪಿತರ ಅನುಬಂದ - 17 ರಿಂದ 23ರ ಮಾಹಿತಿಯನ್ನು ನಿಪಿ.203ರಂತೆ ಸ್ವೀಕರಿಸಿರುತ್ತೇನೆ. ಅದರೊಂದಿಗೆ ದಾಖಲಾತಿಗಳನ್ನು ಕೂಡ ನೀಡಿರುತ್ತಾರೆ. ಅವುಗಳು ನಿಪಿ.203ರ ಪುಟ ಸಂಖ್ಯೆ 483 ರಿಂದ 510ರವರೆಗೆ ಇರುತ್ತದೆ. ಈ ಭಾಗವನ್ನು ನಿಪಿ.203(1) ಎಂದು ಗುರುತಿಸಲಾಯಿತು.

45. ವ್ಯವಸ್ಥಾಪಕರು, ಎಸ್.ಬಿ.ಐ ಮೈಸೂರು ಇವರಿಗೆ ಪತ್ರ ಬರೆದು ಆರೋಪಿತರಿಗೆ ಬ್ಯಾಂಕ್ ಎಕ್ಸಟ್ರಾಕ್ಟ್ ಅನ್ನು ನೀಡಿವಂತೆ ನಿಪಿ.85ರಂತೆ ಪತ್ರ ಬರೆದಿರುತ್ತೇನೆ. ಅದಕ್ಕೆ ಸದರಿಯವರು ನಿಪಿ.86ರ ಪತ್ರದೊಂದಿಗೆ ನೀಡಿದ ಮಾಹಿತಿಯನ್ನು ಸ್ವೀಕರಿಸಿರುತ್ತೇನೆ. ಅದರೊಂದಿಗೆ ನೀಡಿದ ದಾಖಲಾತಿಯನ್ನು ನಿಪಿ.86(1) ಎಂದು ಗುರುತಿಸಲಾಯಿತು.

46. ಅದೇ ರೀತಿ ಆರೋಪಿತರ ಎಸ್,ಬಿ.ಐ ಹಾಸನ ಮುಖ್ಯ ಶಾಖೆ ಇಲ್ಲಿ ಹೊಂದಿರುವ 10693608695ಕ್ಕೆ ಸಂಬಂಧಿಸಿದ ಬ್ಯಾಂಕ್ ಖಾತಾ ಸ್ಟೇಟ್ ಮೆಂಟ್ ಅನ್ನು ಈಗಾಗಲೇ ಗುರುತಿಸಲ್ಪಟ್ಟಿರುವ ನಿಪಿ.77ರ ಪತ್ರದೊಂದಿಗೆ ನಿಪಿ.77(1)ರಂತೆ ಸ್ವೀಕರಿಸಿರುತ್ತೇನೆ.

(ಈ ಹಂತದಲ್ಲಿ ಮುಂದಿನ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**